International Journal of Kannada Research
www.kannadajournal.com

**ISSN: 2454–5813**
IJKR 2019; 5(2): 163-164
© 2019 IJKR
www.kannadajournal.com
Received: 13-02-2019
Accepted: 15-03-2019

**Mallu Lamani**
Research Student,
Gulbarga University Kalaburagi,
Karnataka, India

**Correspondence**
**Mallu Lamani**
Research Student,
Gulbarga University Kalaburagi,
Karnataka, India

# ವರದಕ್ಷಿಣೆ ಕಾಲಚಕ್ರದಡಿ ಕಂಗಾಲಾಗುತ್ತಿರುವ ಲಂಬಾಣಿ ಜನಾಂಗದವರು

**Mallu Lamani**

ಅನೇಕ ಜಾತಿ–ಉಪಜಾತಿಗಳಿಂದ ಹಲವಾರು ಧರ್ಮದವರು ಒಟ್ಟಾಗಿ ವಾಸಿಸುತ್ತಿರುವ ನಮ್ಮ ಭವ್ಯ ಭಾರತದಲ್ಲಿ 'ವರದಕ್ಷಿಣೆ' ಯಂತಹ ಅನೇಕ ಮಾರಕ ಪಿಡುಗುಗಳು ಹಿಂದಿನಿಂದಲೂ ಇಂದಿಗೂ ಜೀವಂತವಾಗಿ ಬೇರೂರಿ ಅನೇಕ ಬಡ ಜನರ ನೆಮ್ಮದಿಯನ್ನು ಹಾಳು ಮಾಡುತ್ತಿವೆ. ಕಲಿಯುಗದ ಇಂದಿನ ಆಧುನಿಕ ಕಾಲದಲ್ಲಿ ವರದಕ್ಷಿಣೆಯ ಪಿಡುಗು ಬಡವರಿಗೆ ಮಾರಕವಾಗಿ ಪರಿಣಮಿಸಿದರೆ ಶ್ರೀಮಂತರಿಗೆ ಇದು ಪೂರಕವಾಗಿದೆ. ಸ್ವತಂತ್ರ ಪೂರ್ವದಿಂದಲೂ ಈ ಪದ್ಧತಿ ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ರೂಢಿಯಿಂದ ಬಂದು ಇಂದು ಗಟ್ಟಿಯಾಗಿ ಬೇರೂರಿ ಹೆಮ್ಮರವಾಗಿ ಬೆಳೆದು ನಿಂತಿದೆ. ಕಾಲ ಬದಲಾದಂತೆ ಬದಲಾವಣೆ ಹೊಂದುತ್ತಿರುವ ಈ ಪಿಡುಗಿಗೆ ಕ್ರಮೇಣವಾಗಿ ಕಡಿವಾಣ ಹಾಕದೇ ಇದ್ದರೆ, ಬಡಜನರ ಮೇಲೆ ಬಹಳಷ್ಟು ಕೆಟ್ಟ ಪರಿಣಾಮ ಬೀರುತ್ತದೆ. ಶೈಕ್ಷಣಿಕವಾಗಿ ನಮ್ಮ ದೇಶ ಮುಂದುವರೆಯುತ್ತಿದ್ದರೂ ವರದಕ್ಷಿಣೆ ಎಂಬುದು ಮತ್ತಷ್ಟು ವ್ಯಾಪಕವಾಗಿ ಹರಡುತ್ತಾ ಇದೇ ವಿನಃ ಕಡಿಮೆಯಾಗುತ್ತಿಲ್ಲ.

ಅನೇಕ ಜಾತಿಯ ಜನಾಂಗದವರು ವಾಸಿಸುತ್ತಿರುವ ನಮ್ಮ ದೇಶದಲ್ಲಿ ಲಂಬಾಣಿ ಜನಾಂಗದವರು ಸಹ ಒಬ್ಬರಾಗಿದ್ದಾರೆ. ನಮ್ಮಲ್ಲಿ ಲಂಬಾಣಿ ಜನರು ತಮ್ಮದೇಯಾದ ಸಂಸ್ಕೃತಿ ಮತ್ತು ಧಾರ್ಮಿಕ ಪದ್ಧತಿಗಳ ಆಚರಣೆಯ ಮುಖಾಂತರ ರಂಗುರಂಗಿನ ಬಟ್ಟೆಗಳನ್ನು ಧರಿಸುವ ಮೂಲಕ ವಿಶೇಷವಾಗಿ ಗುರ್ತಿಸಿಕೊಂಡಿದ್ದಾರೆ.

ಹಿಂದಿನ ಕಾಲದಿಂದಲೂ ರೂಢಿಯಿಂದ ಬಂದಿರುವ ಲಂಬಾಣಿ ಕಥನಗೀತೆಗಳು, ಹೋಳಿ ಹಬ್ಬದ ಆಚರಣೆ, ದೀಪಾವಳಿ, ಆಚರಣೆ, ಮದುವೆಯ ಸಂಭ್ರಮ, ಹುಟ್ಟು ಹಬ್ಬ ಮುಂತಾದ ಆಚರಣೆಗಳಿಂದ ಲಂಬಾಣಿ ಜನಾಂಗದವರು ಇಂದಿಗೂ ಜಗತ್ ಪ್ರಸಿದ್ಧಿ ಪಡೆದುಕೊಂಡು ತಮ್ಮನ್ನು ತಾವೇ ಗುರ್ತಿಸಿಕೊಳ್ಳುತ್ತಾರೆ. ಕಾಯಕ ತತ್ವದಡಿ ಬದುಕುತ್ತಿರುವ ಲಂಬಾಣಿ ಜನರಲ್ಲಿ ಹಿಂದಿನ ಸಂಪ್ರದಾಯಂತೆ ರೂಢಿಯಿಂದ ಬಂದಿರುವ 'ವರದಕ್ಷಿಣೆ' ಪದ್ಧತಿ ಆಧುನಿಕ ಜಗತ್ತಿನ ಕಂಪ್ಯೂಟರ್ ಯುಗದಲ್ಲಿ ಎಲ್ಲ ತಾಂಡಾಗಳಲ್ಲಿ ಹರಡಿ ಹೆಮ್ಮರವಾಗಿ ಬೆಳೆದು ನಿಂತು ಲಂಬಾಣಿ ಸಮುದಾಯದ ಮೇಲೆ ಅತ್ಯಂತ ಕೆಟ್ಟ ಪರಿಣಾಮವನ್ನುಂಟು ಮಾಡುತ್ತಿದೆ. ಇದಕ್ಕೆ ಸದ್ಯದ ಜೀವಂತ ಉದಾಹರಣೆ ಎಂದರೆ ಕಲಬುರಗಿ ಜಿಲ್ಲೆಯ ಚಿಂಚೋಳಿ ತಾಂಡೆಯಲ್ಲಿ ಹೆಣ್ಣು ಮಕ್ಕಳ ಮಾರಾಟ ಮಾಡುತ್ತಿರುವ ವಿಷಯ ಎಲ್ಲ ಸಮೂಹ ಮಾದ್ಯಮಗಳಲ್ಲಿ ಬಹಳಷ್ಟು ಚರ್ಚೆಯ ವಿಷಯವಾಗಿತ್ತು. ಇಂದು ಲಂಬಾಣಿ ಜನರಲ್ಲಿ ವರದಕ್ಷಿಣೆಯ ಪರಿಣಾಮದಿಂದಾಗಿ

- ಹೆಣ್ಣು ಮಗುವಿನ ಭ್ರೂಣಹತ್ಯೆ
- ಹುಟ್ಟಿದ ಹೆಣ್ಣು ಮಗುವಿಗೆ ಯಾರಿಗೂ ಗೊತ್ತಾದಂತೆ ಸಾಯಿಸುವುದು
- ಹೆಣ್ಣು ಹಡೆದ ತಾಯಿಗೆ ತವರಲ್ಲಿಯೇ ಬಿಡುವುದು
- ಹೆಣ್ಣು ಹಡೆದ ತಾಯಿಗೆ ಮಾನಸಿಕ ಹಿಂಸೆ ಕೊಡುವುದು
- ಹೆಣ್ಣು ಮಕ್ಕಳು ಮನೆಬಿಟ್ಟು ಓಡಿ ಹೋಗುವುದು.

ಈ ರೀತಿಯ ದುಷ್ಪರಿಣಾಮಗಳು ದಿನದಿನಕ್ಕೆ ಹೆಚ್ಚಾಗುತ್ತಲೇ ಇದೆ. 'ದುಡಿಮೆಯೇ ದುಡ್ಡಿನ ತಾಯಿ' ಎಂದೂ ನಂಬಿಕೊಂಡಿರುವ ಲಂಬಾಣಿ ಜನಾಂಗದವರು ದುಡಿಮೆಗೆ ಹೆಸರುವಾಸಿಯಾಗಿದ್ದಾರೆ.
ಹಿಂದಿನಿಂದಲೂ ಗುಡ್ಡಗಾಡು ಅರಣ್ಯ ಪ್ರದೇಶದಲ್ಲಿ ಬೆಳೆದು ಬಂದಿರುವ ಈ ಜನಾಂಗದವರು

ಪುರುಷರು ಹಾಗೂ ಮಹಿಳೆಯರು ಇಂದಿಗೂ ವಲಸೆ ಹೋಗಿ ದುಡಿಯುವ ಪದ್ಧತಿಯನ್ನು ರೂಢಿಯಾಗಿಸಿಕೊಂಡಿದ್ದಾರೆ. ದುಡಿದು ಸಂತೋಷವಾಗಿ ಜೀವನ ನಡೆಸುವ ಬಡಜನರಿಗೆ ಈ ಪದ್ಧತಿ ಮುಳ್ಳಾಗಿ ಚುಚ್ಚುತ್ತಿದೆ. ನಮ್ಮ ದೇಶದಲ್ಲಿರುವ ಎಲ್ಲ ಜಾತಿಯ ಜನಾಂಗಕ್ಕೆ ಹೋಲಿಸಿದರೆ ಮದುವೆಯನ್ನು ಅತ್ಯಂತ ವಿಜ್ರುಂಭಣೆಯಿಂದ ಲಂಬಾಣಿ ಜನರೇ ಮಾಡುತ್ತಾರೆ. ಎಷ್ಟೇ ಬಡವರಾಗಿದ್ದರೂ ನಾವೇನು ಶ್ರೀಮಂರಿಗೆ ಕಮ್ಮಿ ಇಲ್ಲ ಎನ್ನುವಂತೆ ಹಣದ ಸಮಸ್ಯೆಯಿದ್ದರೂ ಬೇರೆಯರ ಕಡೆಯಿಂದ ತೆಗೆದುಕೊಂಡು ದುಂದು ವೆಚ್ಚಕ್ಕೆ ಮಾರು ಹೋಗುತ್ತಿದ್ದಾರೆ.

ನಮ್ಮ ದೇಶದಲ್ಲಿ ಹಲವಾರು ಜನಾಂಗದವರು ತಮ್ಮದೆಯಾದ ಸಂಪ್ರದಾಯದಂತೆ ಅನೇಕ ರೀತಿಯಾಗಿ ಮದುವೆಯ ಕಾರ್ಯವನ್ನು ಮಾಡುತ್ತಾರೆ. ಆದರೆ ಲಂಬಾಣಿ ಜನಾಂಗದವರು ಸಹ ತಮ್ಮದೇಯಾದ ರೀತಿಯಲ್ಲಿ ಹಿಂದಿನಿಂದಲೂ ಹಿರಿಯರು ಹಾಕಿಕೊಟ್ಟ ಮಾರ್ಗದಂತೆ ಬಹಳಷ್ಟು ವಿಶೇಷವಾಗಿ ವಿಶಿಷ್ಟ ರೀತಿಯಲ್ಲಿ ಮದುವೆ ಮಾಡುತ್ತಾರೆ. ಕಷ್ಟ ನಷ್ಟಗಳನ್ನು ಸಹಿಸಿಕೊಂಡು ಸಂಭ್ರಮದಲ್ಲಿ ಸಂತೋಷಕ್ಕೆ ಬರ ಬರದಂತೆ ನೋಡಿಕೊಳ್ಳುವಂತಹ ಮುಗ್ಧ ಮನಸ್ಸು ಈ ಜನಾಂಗದವರು. ವರದಕ್ಷಿಣೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೆ ಇದೆ. ಶೈಕ್ಷಣಿಕವಾಗಿ ಬಹಳಷ್ಟು ಹಿಂದೆ ಉಳಿದಿದ್ದ ಲಂಬಾಣಿಗರು ಈಗ ಸ್ವಲ್ಪ ಮಟ್ಟಿಗೆ ಸುಧಾರಿಸಿಕೊಳ್ಳುತ್ತಿದ್ದರೂ ವರದಕ್ಷಿಣೆಯ ಪಿಡುಗಿಗೆ ಸಂಪೂರ್ಣವಾಗಿ ಮಾರಿ ಹೋಗುತ್ತಿದ್ದಾರೆ. ತಮ್ಮ ಮಗಳು ಸುಖವಾಗಿರಬೇಕಾದರೆ ಅವರು ಬೇಡಿದಷ್ಟು ಕೊಡುವುದೇ ಲೇಸು ಎಂದೂ ನಂಬುತ್ತಿದ್ದಾರೆ. ಇದರಿಂದಾಗಿ ಬಡವರಿಗೆ ಆಗುತ್ತಿರುವ ತೊಂದರೆ ಅಷ್ಟಿಷ್ಟಲ್ಲ ಅದೂ ಊಹಿಸಲಾರದಷ್ಟಾಗಿ ಪರಿಣಮಿಸುತ್ತದೆ. ಇಂದಿನ ಆಧುನಿಕ ಯುಗದಲ್ಲಿ ಬಡ ಜನರಲ್ಲಿ ಬೇರೆ ಜಾತಿಯವರು ಹೋಲಿಸಿದರೆ ಲಂಬಾಣಿ ಜನಾಂದವರಲ್ಲಿಯೇ ಹೆಚ್ಚಿನ ವರದಕ್ಷಿಣೆ ಹಾಗೂ ಮದುವೆಯ ದುಂದು ವೆಚ್ಚಕ್ಕೆ ಮಾರು ಹೋಗುತ್ತಿದ್ದಾರೆ. ಸಾಮಾನ್ಯ ಜನರಲ್ಲಿ ಹಾಗೂ ಶ್ರೀಮಂತರಲ್ಲಿ ಬಹಳಷ್ಟು ವ್ಯತ್ಯಾಸ ಕಂಡು ಬಂದರೂ ವರದಕ್ಷಿಣೆಯಲ್ಲಿ ಮಾತ್ರ ಎಲ್ಲವೂ ಸಮನಾಗಿರುವಂತೆ ತೋರ್ಪಡಿಸುತ್ತಿದ್ದಾರೆ. ಶ್ರೀಮಂತರು ಬಡವರ ಮನೆಗೆ ಹೆಣ್ಣು ಕೇಳಲು ಬಂದರೆ ಅವರಿಗೆ ಅದೇ ಪರಮಾನಂದವಾಗುತ್ತದೆ. ಅವರಿಗೆ ಹೆಣ್ಣು ಕೊಡಲು ಕೆಲವೊಮ್ಮೆ ತಮ್ಮ ಆಸ್ತಿಯನ್ನೇ ಮಾರಬೇಕಾದ ಪರಿಸ್ಥಿತಿ ಬಂದರೂ ಹಿಂಜರಿಯುವುದಿಲ್ಲ.

ವಿಜಯಪೂರ ಜಿಲ್ಲೆಯ ಸುತ್ತಮುತ್ತಲಿನ ತಾಂಡಯ ವರದಕ್ಷಿಣೆಯ ವಿಷಯವನ್ನು ನಾನೇ ಖುದ್ದಾಗಿ ಚರ್ಚೆ ಮಾಡಲಾಗಿ ಇದು ಒಬ್ಬರಿಬ್ಬರಿಂದ ಬಗೆಹರೆಯುವ ಸಮಸ್ಯೆಯಲ್ಲ. ಹಿಂದೆ ಗಾಂಧೀಜಿ, ಬಸವಣ್ಣ ಹೋರಾಟ ಮಾಡಿದರೂ ಇದು ನಾಶವಾಗಿಲ್ಲ. ಇನ್ನೂ ಹೆಚ್ಚಾಗಿಯೇ ಬೆಳೆಯುತ್ತಿದೆ. ಹೊರತು ಕಡಿಮೆಯಾಗಿಲ್ಲ. ಎಂದೂ ತಿಳಿದವರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಇದರಿಂದ ಆಗುತ್ತಿರುವ ತೊಂದರೆ ಎಲ್ಲರಿಗೂ ಗೊತ್ತಿದ್ದರೂ ಅದನ್ನೆ ಅನುಸರಿಸುತ್ತಿದ್ದಾರೆ. ಅಂದರೆ ನಾವು ಎಷ್ಟೊಂದು ಧರ್ಮ ಸಂಕಷ್ಟದ ಸುಳಿಯಲ್ಲಿ ಸಿಲುಕಿಕೊಂಡಿದ್ದೇವೆ ಎಂಬುದನ್ನು ನಾವೇ ಅರ್ಥಮಾಡಿಕೊಳ್ಳಬೇಕಾಗಿದೆ.

ಲಂಬಾಣಿ ಜನಾಂಗದವರು ಇಂದು ವರದಕ್ಷಿಣೆ ಬಿಟ್ಟು ಮದುವೆಗೆ ಬೇರೆ ಬೇರೆ ರೀತಿಯಲ್ಲಿ ಸುಮ್ಮನೆ ದುಂದು ವೆಚ್ಚಕ್ಕೆ ಮಾರಿ ಹೋಗುತ್ತಿರುವುದು ನಿಜವಾಗಲೂ ಕಳಕಳಿಯ ವಿಷಯವಾಗಿದೆ. ಅದೇನೆಂದರೆ,

ಮದುವೆಗೆ ಮೊದಲೇ ಮದುವೆಯ ಸಂತಿ ಮಾಡುವ ದಿನಾಂಕವನ್ನು ನೇಮಿಸುತ್ತಾರೆ. ಸಂತೆಗೆ ತಾಂಡೆಯ ಸಮಸ್ತ ಗುರು ಹಿರಿಯರು ಮನೆಗೆ ಒಬ್ಬರಂತೆ ಪುರುಷರು ಅಥವಾ ಮಹಿಳೆಯರು ಹಾಜರಿರುವಂತೆ ಮನೆ ಮನೆಗೆ ಹೋಗಿ ಕರೆಯುತ್ತಾರೆ. ಇದೇ ಒಂದು ಮದುವೆಯ ಕಾರ್ಯಕ್ರಮಗಿಂತ ದೊಡ್ಡದಾಗಿರುತ್ತದೆ. ಮಧ್ಯಾಹ್ನ ಊಟ ಮತ್ತೆ ರಾತ್ರಿ ಊಟ ಸರಾಯಿ ಕೊಡುತ್ತಾರೆ. ಇದು ಇತ್ತೀಚಿಗೆ ವರದಕ್ಷಿಣೆಯ ಜೊತೆಗೆ ಬಳುವಳಿಯಾಗಿ ಹೊಸದಾಗಿ ಸೃಷ್ಟಿಯಾಗಿರುವ ಒಂದು ಕೆಟ್ಟ ಪದ್ಧತಿಯಾಗಿದೆ.

ಈ ಪದ್ಧತಿ ಕೇವಲ ಉತ್ತರ ಕರ್ನಾಟಕದ ಕಡೆ ಮಾತ್ರ ಜಾರಿಯಲ್ಲಿದೆ. ದಕ್ಷಿಣ ಕರ್ನಾಟಕದ ತಾಂಡೆಗಳಿಗೆ ಇದರ ವಿಚಾರ ಇನ್ನೂ ಗೊತ್ತಿಲ್ಲ. ಆಧುನಿಕ ಯುಗದ ಮೊಬೈಲ್ ದುನಿಯಾದಲ್ಲಿ ಈ ವಿಚಾರ ಬಹುಬೇಗನೇ ಹರಡಿ ಎಲ್ಲ ಲಂಬಾಇ ತಾಂಡೆಗಳಲ್ಲಿ ಇದು ಸಹ ಜಾರಿಯಾದರೆ ವರದಕ್ಷಿಣೆಯ ಪಿಡುಗುಗಳಿಗೆ ಬಲಿಯಾಗುತ್ತಿರುವ ಬಡಜನರಿಗೆ ಮತ್ತೊಂದು ಬರೆ ಹಾಕಿದಂತಾಗುತ್ತದೆ. ಎಲ್ಲ ಜಾತಿಯರಲ್ಲಿ ಕೇವಲ 8ರಿಂದ 15 ಜನರು ಮದುವೆಯ ಸಂತಿಗೆ ಹೋಗುತ್ತಾರೆ. ಆದರೆ ವಿಜಯಪೂರದಲ್ಲಿ ಜಿಲ್ಲೆಯ ಕಡೆ ಮದುವೆಯ ಸಂತೆಗೆ 100 ರಿಂದ 150 ಜನರು ಮದುವೆಯ ಸಂತೆಗೆ ಹೋಗುತ್ತಾರೆ. ಇದು ಸಹ ಬಡ ಜನರಿಗೆ ಬಹಳಷ್ಟು ಕೆಟ್ಟ ಪರಿಣಾಮವನ್ನು ಉಂಟುಮಾಡುತ್ತದೆ.

ವರದಕ್ಷಿಣೆಯ ಕೆಟ್ಟ ಪರಿಣಾಮದಿಂದಾಗಿ ಪ್ರೀತಿಯಿಂದ ಬೆಸೆಯುವ ಎರಡು ಮನಸ್ಸುಗಳಿಗೆ ಇದು ಮಾರಕವಾಗಿದೆ. ಏಕೆಂದರೆ ಬಡತನದಲ್ಲಿ ಹುಟ್ಟಿದ ಹೆಣ್ಣು ಮಕ್ಕಳಿಗೆ ಅವರ ಮನಸ್ಸಿಲ್ಲದಿದ್ದರೂ, ಹೆಚ್ಚು ವಯಸ್ಸಾಗಿದ್ದರೂ, ಅಂಗವಿಕಲತೆ ಹೊಂದಿದರೂ ಅನಿವಾರ್ಯ ಪರಿಸ್ಥಿತಿಯಿಂದಾಗಿ ಮನಸ್ಸಿಲ್ಲದೇ ಮದುವೆ ಮಾಡಿ ಬಿಡುತ್ತಾರೆ. ಇದರಿಂದ ಹೆಣ್ಣು ಮಕ್ಕಳು ಮಾನಸಿಕವಾಗಿ ಕೊರಗಿ ಕೊನೆಗೆ ಆತ್ಮಹತ್ಯೆ ಮಾಡಿಕೊಂಡವರು ಅನೇಕ ಜೀವಂತ ಉದಾಹರಣೆಗಳು ನಾವು ಕಂಡಿದ್ದೇವೆ. ಅದಕ್ಕೆ ಜನಪದ ಸಾಹಿತ್ಯದಲ್ಲಿ ಜಪನದ ಗೀತೆಗಳಲ್ಲಿ ಬಡವರ ಮನೆಯಲ್ಲಿ ಹೆಣ್ಣು ಹುಟ್ಟಬಾರದು ಎಂಬುದು ಒಂದು ಪ್ರಸಿದ್ಧ ಗಾದೆಯಾಗಿ ಪರಿಣಮಿಸಿದೆ.

ಕಾಲ ಬದಲಾದಂತೆ ಸಮಾಜವು ಬದಲಾಗುತ್ತದೆ. ಕೆಲವು ಆಚರಣೆಗಳು ಸಮಾಜಕ್ಕೆ ಪೂರಕವಾಗಿದ್ದರೆ, ಇನ್ನು ಕೆಲವು ಆಚರಣೆಗಳು ಸಮಾಜಕ್ಕೆ ಮಾರಕವಾಗಿದೆ. ಆದ್ದರಿಂದ ಪೂರಕವಾಗಿರುವ ಸಂಪ್ರದಾಯಗಳನ್ನು ಪೋಷಿಸಿ ಮಾರಕವಾಗಿ ಸಂಪ್ರದಾಯಗಳನ್ನು ಹಂತ ಹಂತವಾಗಿ ಕ್ರಮೇಣ ಹೋಗಲಾಡಿಸಿ ಲಂಬಾಣಿ ಜನಾಂಗದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಬಂಜಾರಾ ಸಂಘ ಸಂಸ್ಥೆಗಳನ್ನು ಹಾಗೂ ಯುವ ಜನರು ಇದನ್ನು ಗಂಭೀರವಾಗಿ ಪರಿಗಣಿಸಿ ಇದರ ವಿನಾಶಕ್ಕೆ ಬಡಜನರ ಬಲಿಕೊಡಬೇಕಾಗುತ್ತದೆ. ಯುವಜನರು ಪ್ರಮುಖ ಮುಖಂಡರು, ರಾಜಕೀಯ ವ್ಯಕ್ತಿಗಳು ಸಂಶೋಧನಾಕಾರರು, ಲೇಖಕರು, ಸಾಹಿತಿಗಳು, ಬುದ್ಧಿಜೀವಿಗಳು ಇದರ ಬಗ್ಗೆ ಗಮನ ಹರಿಸಿದ್ದೆ ಆದರೆ ಸ್ವಲ್ಪ ಮಟ್ಟಿಗೆ ವರದಕ್ಷಿಣೆಯ ಪಿಡುಗನ್ನು ತಡೆಯಬಹುದು ಹಾಗೂ ಇದಕ್ಕೆ ಪರಿಹಾರ ಮಾರ್ಗ ಹಾಕಿ ಜನರಿಗೆ ಅನುಕೂಲ ಮಾಡಬಹುದಾಗಿದೆ. ಇದರಿಂದಾಗಿ ಹಿಂದೆ ಹೋರಾಡಿ ವೀರ ಮರಣ ಹೊಂದಿದ ಗಾಂಧೀಜಿ, ಬಸವಣ್ಣನವರ ಆತ್ಮಕ್ಕೆ ಶಾಂತಿ ಸಿಗಬಹುದು. ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆದರೆ ಮುಂದೆ ನಡೆಯುವ ದೊಡ್ಡ ಅನಾಹುತಕ್ಕೆ ಗೋಡೆ ಕಟ್ಟಿದಂತಾಗುತ್ತದೆ.

**ಆಕರ ಗ್ರಂಥಗಳು**


1. ಡಾ.ಡಿ.ಬಿ.ನಾಯಕ್–ಲಂಬಾಣಿ ಜನಪದ ಸಾಹಿತ್ಯ, (ಸಮಾಜೋ–ಸಾಂಸ್ಕೃತಿಕ ಅಧ್ಯಯನ)
2. ಹರಿಲಾಲ ಪವಾರ–ಲಂಬಾಣಿಗರಲ್ಲಿ ಮದುವೆಯ ಸಂಪ್ರದಾಯಗಳು
3. ಡಾ.ಪಿ.ಕೆ.ಖಂಡೋಬಾ – ಕರ್ನಾಟಕದ ಲಂಬಾಣಿಗಳು ಒಂದು ಸಾಂಸ್ಕೃತಿಕ ಅಧ್ಯಯನ